# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ. 1462/2024

ಸಾಕ್ಷಿದಾರರ ಹೇಳಿಕೆಃ

**ಹೆಸರು** : ರಂಗನಾಥ ಚಾಸಾಃ **2** ಪ್ರಾಸಾಃ **1**

**ತಂದೆಯ ಹೆಸರು** : ತೀರ್ಥಲಿಂಗಪ್ಪ

**ವಯಸ್ಸು** : 40 ವರ್ಷ

**ವೃತ್ತಿ** : ವ್ಯವಸಾಯ

**ವಾಸಸ್ಥಳ** : ಬೆಳಗುತ್ತಿ ಗ್ರಾಮ

ದಿನಾಂಕಃ **20-11-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

ಚಾಸಾ-3 ಮತ್ತು ಆರೋಪಿ ಗೊತ್ತು.ಈಗೇ ಸುಮಾರು 1 ವರ್ಷಗಳ ಹಿಂದೆ ಪೊಲೀಸರ ಕೋರಿಕೆಯ ಮೇರೆಗೆ 5 ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮದ್ಯದ ಪೌಚ್ ಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ಮತ್ತು ಮದ್ಯದ ಪೌಚ್ ಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

ಮಹಜರ್ ಅನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಶೋಧನಾ ಸಮುಚ್ಚಿತ ಆಧಾರವನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಮಹಜರ್

ಸಮಯದಲ್ಲಿ ನೀಡಿದ ನೋಟೀಸನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು, ಸ್ವತ್ತಿನ ಪಟ್ಟಿಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು, ಮಾದರಿ ಮೊಹರಿನ ನಕಲನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>

ಪೊಲೀಸರಿಂದ ನಿಪಿ-3 ರಂತೆ ನೋಟೀಸನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ನಿಪಿ-2 ರಂತೆ ಶೋಧನಾ ಸಮುಚ್ಚಿತ ಮಾಡಲು ಸಲ್ಲಿಸಿದ ವಾರೆಂಟ್ ಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 26-01-2024 ರಂದು ಸಂಜೆ 06-00 ರಿಂದ 07-00 ಗಂಟೆಸ ಮಯದಲ್ಲಿ ಪೊಲೀಸರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಆರೋಪಿಯಿಂದ 90 ಎಂ ಎಲ್ ನ ಹೈವರ್ಸ್ಡ್ ಚಿಯರ್ಸ್ ವಿಸ್ಕಿಯ 96 ಟೆಟ್ರಾ ಪ್ಯಾಕೇಟ್ ಗಳನ್ನು ನಿಪಿ-1 ಅಮಾನತ್ತು ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಿಪಿ-1 ಮಹಜರ್ ಸಮಯದಲ್ಲಿ ಪೊಲೀಸರು ಸದರಿ ಮಧ್ಯದ ಪೌಚ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ನಿಪಿ-5 ರಂತೆ ಮಾದರಿ ಮೊಹರಿನ ನಕಲನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಅಮಾನತ್ತು ಪಡಿಸಿಕೊಂಡ ಮಧ್ಯದ ಪೌಚ್ ಗಳನ್ನು ನಿಪಿ-4 ಸ್ವತ್ತಿನ ಪಟ್ಟಿಯಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ನಮೂದು ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ಮತ್ತು ಆರೋಪಿಯನ್ನು ಪುನಃ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರಿಗೆ ನಿಪಿ-6 ರಂತೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಆರೋಪಿಯಿಂದ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಮಧ್ಯದ ಪೌಚ್ ಗಳನ್ನು ಅಮಾನತ್ತು ಪಡಿಸಿಕೊಂಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮಧ್ಯದ ಪೌಚ್ ಗಳನ್ನು ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿದ್ದರೂ ಸಹ ಅಮಾನತ್ತು ಪಡಿಸಿಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.